

ಡಾ. ಶಿವರಂಜಿನಿ. ಶಿ. ಮೊಗಲಿ

ಗ್ರಂಥಪಾಲಕರು

ಡಾ. ಶಿವರಂಜಿನಿ. ಶಿ. ಮೊಗಲಿ ಇವರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಇದರಲ್ಲಿ ದಿನಾಂಕ ೧೭.೧೦.೨೦೧೯ ರಿಂದ ಗ್ರಂಥಪಾಲಕ ಹುದ್ದೆಗೆ ನಿಯುಕ್ತಿಗೊಂಡಿದ್ದು, ಅವರ ಶೈಕ್ಷಣಿಕ-ಹಿನ್ನೆಲೆ ಅವರ ಹುದ್ದೆಗೆ ಪೂರಕವಾಗಿದೆ. ಇವರು ೨೦೦೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ವರ್ಗದೊಂದಿಗೆ ಡಿಸ್ಟಿಂಕ್ಷನ್ನಲ್ಲಿ ಉತ್ತೀರ್ಣರಾಗಿ ೨ನೇ ಸ್ಥಾನ ಪಡೆದದ್ದಕ್ಕಾಗಿ ಗ್ರಂಥಾಲಯ ಪಿತಾಮಹ ಡಾ.ಎಸ್, ಆರ್. ರಂಗನಾಥನ್ ಇವರ ಸ್ಮರಣಾರ್ಥ ಇಡಲಾದ ಬಂಗಾರ ಪದಕ ಪಡೆದಿರುತ್ತಾರೆ. ತದನಂತರ ಅದೇ ವಿಭಾಗದಲ್ಲಿ ಯು.ಜಿ.ಸಿ. ಸ್ಯಾಪ ಪ್ರಾಜೆಕ್ಟನಲ್ಲಿ ಸಹಾಯಕಿಯಾಗಿ ಕಾರ್ಯನಿರ್ವಹಿಸುತ್ತಾ, “ಮ್ಯಾಪಿಂಗ ಆಫ್ ಇಂಡಿಯನ್ ಸೋಶಿಯಲ್ ಸೈನ್ಸ ಲಿಟರೇಚರ್: ಏ ಸೈಂಟೊಮೆಟ್ರಿಕ್ ಸ್ಟಡಿ” ಅನ್ನುವ ಪ್ರಬಂಧವನ್ನು ಮಂಡಿಸಿ ಪಿ.ಎಚ್.ಡಿ ಪದವಿ ಪಡೆದಿರುತ್ತಾರೆ. ಇಲ್ಲಿಯವರೆಗೆ ಒಟ್ಟು ೧೭ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದು, ಸಂಶೋಧನಾ ಕ್ಷೇತ್ರದಲ್ಲಿ ಆಸಕ್ತಿ ಉಳ್ಳವರಾಗಿದ್ದಾರೆ.

ಇವರು ೨೦೧೪ ರಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡ ಇದರ ಗ್ರಂಥಾಲಯದಲ್ಲಿ ಸೇವೆ ಪ್ರಾರಂಭಿಸಿ ಸಾಕಷ್ಟು ಕೆಲಸದ ಅನುಭವ ಹೊಂದಿದ್ದಾರೆ. ಇವರಿಗೆ ಗ್ರಂಥಾಲಯಕ್ಕೆ ಆಗಮಿಸುವ ಸಂಶೋಧನಾ ಅಭ್ಯರ್ಥಿಗಳಗೆ, ವಿಧ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಬೇಕಾಗಬಹುದಾದ ಸಾಹಿತ್ಯ, ಉಲ್ಲೆಖ ಗ್ರಂಥ ಹಾಗು ಅಗತ್ಯ ಸಂಪನ್ಮೂಲಗಳನ್ನು ದೊರಕಿಸಿಕೊಟ್ಟು, ಅವರಲ್ಲಿ ಓದುವ ಹವ್ಯಾಸ ಹೆಚ್ಚಾಗುವಂತೆ ಪ್ರೇರೇಪಿಸುವುದರಲ್ಲಿ ಆಸಕ್ತಿ ಇದೆ.